

## ದಾಂಪತ್ಯಕ್ಕಾಗಿ ಸಂಗಾತಿಯನ್ನು ಆಯ್ಕೆ ಮಾಡುವ ಜವಾಬ್ದಾರಿ ಯಾರದು?

ಡಾ.ವಿನೋದ ಛೆಬ್ಬಿ

# 126: ನಾವೆಲ್ಲಿ ತಪ್ಪಿದೆವು?-1

ಒಂದು ತಲೆಮಾರಿನ ಸರಿಸುಮಾರು ಎಲ್ಲ ದಾಂಪತ್ಯಗಳೂ ಸಮಕಾಲೀನ ಸಂಗತಿಗಳಿಂದ ಪ್ರಭಾವಿತವಾಗಿ ಬದಲಾವಣೆ ಹೊಂದುತ್ತ, ಸಂಸ್ಕೃತಿಯ ಬದಲಾವಣೆಯಾಗುತ್ತ ಪತಿ ಪತ್ನಿಯರ ಸಂಬಂಧದ ನೀತಿ ನಿಯಮಗಳೂ ಬದಲಾಗುತ್ತವೆ ಎಂದು ಹೋದಸಲ ಹೇಳಿದ್ದೆ. ವಿಷಯ ಹೀಗಿರುವಾಗ ಮದುವೆಗಾಗಿ ಸಂಗಾತಿಯನ್ನು ಆರಿಸಿಕೊಳ್ಳುವ ರೀತಿಯೂ ಬದಲಾದರೆ ಆಶ್ಚರ್ಯವೇನಿಲ್ಲ ಎನ್ನುವುದಕ್ಕೆ ಒಂದು ದೃಷ್ಟಾಂತ ನೆನಪಾಗುತ್ತದೆ.

ಇತ್ತೀಚೆಗೆ ಮಧ್ಯವಯಸ್ಸಿನ ದಂಪತಿ – ರಾಮಣ್ಣ ಹಾಗೂ ಸೀತಾಲಕ್ಷ್ಮಿ ಎಂದು ಅವರನ್ನು ಹೆಸರಿಸೋಣ – ನನ್ನನ್ನು ಭೇಟಿಯಾಗಿದ್ದರು. ಚಿಂತಾಕ್ರಾಂತರಾದ ಅವರು ತಮ್ಮ ಕತೆಯನ್ನು ಎಲ್ಲಿಂದ ಶುರುಮಾಡುವುದೆಂದು ತಿಳಿಯದೆ ಮುಖ ಮುಖ ನೋಡಿಕೊಳ್ಳುತ್ತಿದ್ದರು. ಅವರು ತಡೆ ತಡೆದು ಹೇಳಿಕೊಂಡದ್ದು ಮನಸ್ಸು ತಟ್ಟುವಂತಿತ್ತು. ರಾಮಣ್ಣನಿಗೆ ಸ್ವಂತ ಉದ್ಯಮವಿದ್ದು ಇಪ್ಪತ್ತು ಜನರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾನೆ. ಸೀತಾಲಕ್ಷ್ಮಿ ಮನೆಯನ್ನು ನೋಡಿಕೊಳ್ಳುತ್ತ ಗಂಡನ ಉದ್ಯೋಗದಲ್ಲೂ ಸಹಾಯ ಮಾಡುತ್ತಾಳೆ. ಈ ದಂಪತಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ದೊಡ್ಡವಳಿಗೆ 18 ವರ್ಷ ಪೂರ್ತಿಯಾಗಿದೆ. ಚಿಕ್ಕವಳಿಗೆ 14 ವರ್ಷ. ಈಗ ನನ್ನನ್ನು ಭೇಟಿ ಮಾಡಿರುವುದು ದೊಡ್ಡ ಮಗಳ ಕಾರಣದಿಂದ.

ರಾಮಣ್ಣ ಸೀತಾಲಕ್ಷ್ಮಿ ಅವರ ದೊಡ್ಡ ಮಗಳು ಇಪ್ಪತ್ತು ದಿನಗಳ ಹಿಂದೆ ಕಾಲೇಜಿಗೆಂದು ಬ್ಯಾಗ್ ತೆಗೆದುಕೊಂಡು ಹೋದವಳು ಮರಳಿ ಬರಲೇ ಇಲ್ಲ. ಇವರು ರಾತ್ರಿಯೆಲ್ಲ ಕಾಯ್ದು ಮಾರನೆಯ ದಿನ ದೂರು ಕೊಡಬೇಕೆಂದು ಹೊರಡುವಾಗ ಮೊಬೈಲ್ ಸಂದೇಶ ಬಂತು: 'ನಾನು ಪ್ರೀತಿಸುತ್ತಿರುವ ಹುಡುಗನನ್ನು ಮದುವೆಯಾಗಲು ದೂರದೂರಿನ ದೇವಸ್ಥಾನಕ್ಕೆ ಹೋಗಿದ್ದೇನೆ. ಹುಡುಕಲು ಯತ್ನಿಸಬೇಡಿ. ನಿಮಗೆ ತಿಳಿಸದೆ ಈ ನಿರ್ಧಾರ ಕೈಗೊಂಡಿದ್ದಕ್ಕೆ ಕ್ಷಮಿಸಿ' ಪೋಲೀಸರ ಸಹಾಯದಿಂದ ಹೇಗೋ ಇಬ್ಬರನ್ನು ಪತ್ತೆಮಾಡಿ ಕರೆತಂದರು. ವಿಚಾರಣೆಯಲ್ಲಿ ಹುಡುಗಿಗೆ ಹದಿನೆಂಟು ಪೂರ್ತಿಯಾಗಿರುವುದರಿಂದ (ಹುಡುಗನಿಗೆ ಇಪ್ಪತ್ತಮೂರು ವರ್ಷ) ಕಾನೂನು ಪ್ರಕಾರ ಅವರು ಕೈಗೊಂಡಿರುವ ಕ್ರಮವನ್ನು ಪ್ರಶ್ನಿಸಲಾಗದೆಂದು ಪೊಲೀಸರು ಕೈಚೆಲ್ಲಿದ್ದಾರೆ. ನಂತರ ವಿಧ್ಯುಕ್ತವಾಗಿ ಮದುವೆ ಮಾಡಿಕೊಡುವ ಭರವಸೆ ಕೊಟ್ಟು ಮನೆಗೆ ಕರೆದಾಗ ಮಗಳು ಬರಲು ಒಪ್ಪದೆ ಗಂಡನ ಕುಟುಂಬದವರ ಜೊತೆಗೆ ಇರಲು ಹೋಗಿದ್ದಾಳೆ. ಮಗಳನ್ನು ಕಳೆದುಕೊಂಡ ವ್ಯಥೆ, ಅವಳ ಉದ್ಧಟತನಕ್ಕೆ ಸಿಟ್ಟು, ಬಂಧು ಬಳಗಕ್ಕೆ ಮುಖ ತೋರಿಸಲು ಅವಮಾನ, ಇದರ ದುಷ್ಪರಿಣಾಮವು ಎರಡನೆಯ ಮಗಳ ಭವಿಷ್ಯದ ಮೇಲಾಗುವ ಆತಂಕ – ಇದರಿಂದ ದಂಪತಿಗೆ ಇಪ್ಪತ್ತು ದಿನಗಳಲ್ಲಿ ಇಪ್ಪತ್ತು ವರ್ಷಗಳಷ್ಟು ವಯಸ್ಸು ಹೆಚ್ಚಾಗಿದೆ.

ಈ ಘಟನೆಯು ಇಬ್ಬರ ಆತ್ಮವಿಶ್ವಾಸವನ್ನು ಅಲುಗಾಡಿಸಿದೆ. ಒಂದರ ಮೇಲೊಂದು ಸಂದೇಹಗಳು ಹಾಗೂ ಪ್ರಶ್ನೆಗಳು ಹುಟ್ಟುತ್ತಿವೆ. ಮಗಳು ಎಂಥ ದೊಡ್ಡ ತಪ್ಪು ಮಾಡಿದಳು? ಕಷ್ಟಪಟ್ಟು ಬೆಳೆಸಿದ ತಂದೆತಾಯಂದಿರಿಗೆ ಹೀಗೆ ದ್ರೋಹ ಮಾಡಬಹುದೆ? ಅವಳ ಈ ಧಿಡೀರ್ ನಿರ್ಧಾರಕ್ಕೆ ಕಾರಣವೇನು? ಅವಳು ತಿಳಿಸಿ ಹೋಗಬಹುದಿತ್ತಲ್ಲವೆ? ಒಂದುವೇಳೆ ಅವನನ್ನೇ ಮದುವೆ ಆಗುತ್ತೇನೆ ಎಂದು ನಮ್ಮ ಮುಂದೆ ಹೇಳಿದ್ದರೆ ನಾವೇ ಮುಂದೆ ನಿಂತು ಮದುವೆ ಮಾಡಿಕೊಡುತ್ತಿದ್ದೆವು...

ನಾನು ನೊಂದವರಿಗೆ ಸಹತಾಪದಿಂದ ಸ್ಪಂದಿಸುತ್ತಿರುವಾಗ ಸೀತಾಲಕ್ಷ್ಮಿ ಒಂದು ಮಾತು ಹೇಳಿದಳು: ಮಗಳು ತಾಯಿಗೆ ಆಗಾಗ ಕರೆಮಾಡುತ್ತಿರುತ್ತಾಳೆ. ಆಗ ತಾಯಿ ತನ್ನ ದುಃಖವನ್ನು ಹೇಳಿಕೊಳ್ಳುತ್ತ, 'ನಿಮ್ಮಪ್ಪ ದಿನಾಲೂ ನೆನೆಸಿಕೊಂಡು ಕಣ್ಣೀರು ಹಾಕುತ್ತಿದ್ದಾರೆ' ಎಂದು ಹೇಳುತ್ತಿರುತ್ತಾಳೆ. ಮೊನ್ನೆ ಹೀಗೆಯೇ ಹೇಳಿದಾಗ ಮಗಳು ಸಿಡಿಮಿಡಿಗೊಂಡು ಹೇಳಿದಳಂತೆ: 'ಅದೇನಮ್ಮ ದಿನಾಲೂ ಅಪ್ಪ ಕಣ್ಣೀರು ಹಾಕುತ್ತಾರೆ ಅಂತ. ನಾನು ಇಲ್ಲಿ ಸುಖವಾಗಿದ್ದೇನೆ ಎಂದರೂ ಅವರೇಕೆ ಕಣ್ಣೀರು ಹಾಕಬೇಕು? ಇದನ್ನೆಲ್ಲ ಕೇಳಲು ನನಗೆ ಮನಸ್ಸು ಬರುವುದಿಲ್ಲ, ಇನ್ನು ಮುಂದೆ ಫೋನ್ ಮಾಡುವುದಿಲ್ಲ!' ಎಂದು ಮಾತು ನಿಲ್ಲಿಸಿಬಿಟ್ಟಳಂತೆ. ಇದರಿಂದ ದಿಗ್ಭ್ರಮೆಯಾಗಿದೆ. ತಮ್ಮ ದುಃಖಕ್ಕೆ ಮಗಳೇ ಕಾರಣ ಎಂದು ತಪ್ಪು ಹೊರಿಸುವಾಗ ಆಕೆ ಹೊಣೆಹೊರಲು ನಿರಾಕರಿಸಿ, ನಿಮ್ಮ ಕಣ್ಣೀರಿಗೆ ನೀವೇ ಹೊಣೆ ಎಂದಂತಾಗಿ ಇವರ ನೋವು ಇನ್ನೊಂದಷ್ಟು ಹೆಚ್ಚಾಗಿದೆ. ತಾವೆಲ್ಲಿ ತಪ್ಪಿದ್ದೇವೆ ಎಂದು ಗೊತ್ತಾಗುತ್ತಿಲ್ಲ.

ಸೀತಾಲಕ್ಷ್ಮಿ ಇನ್ನೂ ಒಂದು ಮಾತು ಹೇಳಿದಳು. ತಮ್ಮ ಕಷ್ಟ ನುಂಗಿಕೊಂಡು ಈಗಲೂ ಎಲ್ಲರೆದುರು ಮದುವೆ ಮಾಡಿಕೊಡಲು ತಯಾರಾಗಿದ್ದೇವೆ. ಆದರೆ ಮಗಳು ಒಪ್ಪುತ್ತಿಲ್ಲ. ಈಗಾಗಲೇ ಅಕ್ಕಪಕ್ಕದವರಿಗೆ ಸುದ್ದಿ ಮುಟ್ಟಿರಬಹುದೇನೋ, ಅವರೆಲ್ಲ ಒಂದು ರೀತಿಯ ಸಂದೇಹದಿಂದ ವರ್ತಿಸುತ್ತಿದ್ದಾರೆ. ಎಲ್ಲರಿಗೂ ಗೊತ್ತಾದರೆ ಮರ್ಯಾದೆ ಹೋಗುತ್ತದೆ. ಹೋಗುತ್ತಿರುವ ಮರ್ಯಾದೆಯನ್ನು ಉಳಿಸಿಕೊಳ್ಳುವ ಪ್ರಯತ್ನಕ್ಕೆ ಮಗಳ ಸಹಕಾರವಿಲ್ಲ.

ದಂಪತಿ ತಮ್ಮ ಕತೆಯನ್ನು ಹೇಳಿಕೊಳ್ಳುತ್ತಿರುವಾಗ ನನಗೊಂದು ಸಂದೇಹ ಬಂತು. ಮಗಳು ಓಡಿಹೋಗಿ ಮದುವೆ ಮಾಡಿಕೊಳ್ಳುವಷ್ಟು ಹುಡುಗ-ಹುಡುಗಿಯರ ಸಂಬಂಧ ಮುಂದುವರಿದಿದ್ದರೆ ಇದು ಹೆತ್ತವರಿಗೆ ಹೇಗೆ ಗೊತ್ತಾಗಲಿಲ್ಲ? ದಂಪತಿಯನ್ನು ಗಮನಿಸಿದರೆ ಅವರು ಮಕ್ಕಳನ್ನು ಅಲಕ್ಷ್ಯ ಮಾಡುವ ಸ್ವಭಾವದವರಲ್ಲ ಎಂದು ಮೇಲುನೋಟಕ್ಕೆ ಗೊತ್ತಾಗುವಂತಿತ್ತು. ಇದರ ಬಗೆಗೆ ರಾಮಣ್ಣ ಸಮಜಾಯಿಷಿ ನೀಡಿದ. ಮಗಳು ಹತ್ತನೆಯ ತರಗತಿಯಲ್ಲಿ ಓದುತ್ತಿರುವಾಗ ಆ ಹುಡುಗನ ಪರಿಚಯ ಆಗಿತ್ತು. ಅವರು ಹತ್ತಿರವಾಗುತ್ತಿರುವಾಗ ಅಪ್ಪನ ಕೈಯಲ್ಲಿ ಸಿಕ್ಕಿಹಾಕಿಕೊಂಡಿದ್ದರಂತೆ. ರಾಮಣ್ಣ ಹುಡುಗನನ್ನು ಬಯ್ದು ಓಡಿಸಿದನಂತೆ. ಮಗಳಿಗೆ ಎರಡೇಟು ಕೊಟ್ಟು, ಮೊದಲು ಶಿಕ್ಷಣ ಮುಗಿಸು ಎಂದು ಬುದ್ಧಿ ಹೇಳಿದನಂತೆ. ಹೆತ್ತವರಿಗೆ ತಿಳಿಸದೆ ಮಗಳು ಈ ನಿರ್ಧಾರ ಕೈಗೊಂಡಿದ್ದುದಕ್ಕೆ ಕಾರಣವೇನು ಎಂದು ನನಗೆ ಅರ್ಥವಾಯಿತು.

ಅದೆಲ್ಲ ಸರಿ, ಈಗ ಇವರು ನನ್ನನ್ನು ಭೇಟಿ ಮಾಡಲು ಕಾರಣವೇನು, ನಾನು ಹೇಗೆ ಸಹಾಯ ಮಾಡಬಹುದು ಎಂದುಕೊಂಡಿದ್ದಾರೆ ಎಂದೆಲ್ಲ ಕೇಳಬೇಕು ಎಂದುಕೊಳ್ಳುತ್ತಿರುವಾಗ ರಾಮಣ್ಣ ಒಂದು ಮಾತು ಹೇಳಿದ: ಆ ಹುಡುಗ ಇವಳನ್ನು ನಮಗೆ ಗೊತ್ತಿಲ್ಲದಂತೆ ಓಡಿಸಿಕೊಂಡು ಹೋಗಿ ಮದುವೆಯಾಗಿದ್ದಾನಲ್ಲ, ಅವನ ಮನಸ್ಸಿನಲ್ಲಿ ಏನಾದರೂ ದುರುದ್ದೇಶವಿದೆಯೆ? ನನಗೆ ಕುತೂಹಲವಾಯಿತು. ದುರುದ್ದೇಶ ಎಂದರೆ ಹೆಣ್ಣನ್ನು ಮಾರಿಕೊಳ್ಳುವುದು ಇತ್ಯಾದಿ ಏನಾದರೂ... ವಿವರಿಸಲು ಕೇಳಿದೆ. ಆಗ ಅವನು ಹೇಳಿದ: ಮುಂದೆ ಹುಡುಗ ತನ್ನ ಆಸ್ತಿಯ ಮೇಲೆ ಹಕ್ಕು ಸಾಧಿಸಬಹುದೆ? ಈ ಸಂದೇಹ ಹೇಗೆ ಬಂತು ಎಂದು ಕೇಳಿದಾಗ ಅವನು ಹೇಳಿದ್ದು ಆಶ್ಚರ್ಯಕರ ಆಗಿತ್ತು. ಹುಡುಗ ಅಪರಿಚಿತ, ಬಡವ. ಚಿಕ್ಕ ಕೆಲಸದಲ್ಲಿ ಇದ್ದಾನೆ. ತನ್ನನ್ನು ಮಾತಾಡಿಸಿ ಕೇಳಿಲ್ಲ. ಗುಟ್ಟಾಗಿ ಮದುವೆಯಾಗಿ ಮಗಳ ಗಂಡ ಆಗಿಬಿಟ್ಟಿದ್ದನ್ನು ಗಮನಿಸಿದರೆ, ನಾಳೆ ತನ್ನ ನಿಜರೂಪವನ್ನು ತೋರಿಸಿ, ನನಗೆ ಆಸ್ತಿಯಲ್ಲಿ ಪಾಲು ಕೊಡಿ ಎಂದರೆ? ತಾನು ಹಳ್ಳಿಯಿಂದ ಬಂದು ಕಷ್ಟಪಟ್ಟು ಸಂಪಾದಿಸಿರುವುದನ್ನು ಅವನು ಕಿತ್ತುಕೊಳ್ಳಲು ಬಿಡಲೆ?

ಇವರ ಕಥೆಗೆ ತಿರುವು ಬರುತ್ತಿದೆ. ಅದೇನೆಂಬುದನ್ನು ಮುಂದಿನ ಸಲ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ).